## **ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 399
ಸದಸ್ಯರ ಹೆಸರು :ಶ್ರೀಮುನಿರಾಜುಗೌಡ.ಪಿ.ಎಂ.
(ವಿಧಾನಸಭೆಯಿಂದಚುನಾಯಿತರಾದವರು)
ಉತ್ತರಿಸುವ ದಿನಾಂಕ : 21.12.2022.
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | **ಪ್ರಶ್ನೆ** | **ಉತ್ತರ** |
|---|---|---|
| ಅ) | ರಾಮನಗರ ಜಿಲ್ಲೆ. ಕನಕಪುರ ತಾಲ್ಲೂಕು, ಹಾರೋಹಳ್ಳಿ ಗ್ರಾಮದ ಸರ್ವೆ ನಂ.74ರಲ್ಲಿ ಇರುವ ಒಟ್ಟು ಭೂಮಿ ಎಷ್ಟು; ಇದರಲ್ಲಿ ಈ ಹಿಂದೆ ಎಷ್ಟು ಭೂಮಿಯನ್ನು ಹಂಚಲಾಗಿದೆ; ಉಳಿಕೆ ಭೂಮಿ ಎಷ್ಟು; (ವಿವರ ನೀಡುವುದು) | ಕನಕಪುರ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ಗ್ರಾಮದ ಸ.ನಂ. 74 ರಲ್ಲಿ ಹಾಲಿ ಪಹಣಿಯಂತೆ ಒಟ್ಟು ಗೋಮಾಳ ಜಮೀನಿನ ವಿಸ್ತೀರ್ಣ 94-39 ಎಕರೆ ಜಮೀನಿನ ಪೈಕಿ 35-20 ಎ/ಗು ಜಮೀನು ವಿಲೇಯಾಗಿ ಉಳಿಕೆ 59-19 ಎಕರೆ ನಮೂದಿರುತ್ತದೆ. |
| ಆ) | ಸದರಿ ಸರ್ವೆ ನಂ.74ರಲ್ಲಿ ರೈತರಿಗೆ ನಿವೇಶನ ಹಂಚಿಕೆ ಮಾಡಲಾಗಿದೆಯೇ; ಮಾಡಲಾಗಿದ್ದಲ್ಲಿ, ಫಲಾನುಭವಿಗಳ ಪಟ್ಟಿಯನ್ನು ನೀಡುವುದು; | ಕನಕಪುರ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ಗ್ರಾಮದ ಸ.ನಂ. 74 ರಲ್ಲಿ ಕಂದಾಯ ಇಲಾಖೆ ವತಿಯಿಂದ ನಿವೇಶನ ಹಂಚಿಕೆಗೆ ಜಮೀನು ಕಾಯ್ದಿರಿಸಿರುವುದಿಲ್ಲ. |
| ಇ) | ಸದರಿ ಸರ್ವೆ ನಂ.74ರಲ್ಲಿ ನಕಲಿ ಹಕ್ಕುಪತ್ರ ಸೃಷ್ಟಿಸಿ ಭೂಮಿಯನ್ನು ಕಬಳಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | ಕಂದಾಯ ಇಲಾಖೆ ವತಿಯಿಂದ ನಿವೇಶನ ಹಂಚಿಕೆಗೆ ಜಮೀನು ಕಾಯ್ದಿರಿಸಿರುವುದಿಲ್ಲ. ಆದಾಗ್ಯೂ ಹಾರೋಹಳ್ಳಿ ಗ್ರಾಮದ ಸ.ನಂ. 74 ರ ಸರ್ಕಾರಿ ಗೋಮಾಳ ಜಮೀನಿಗೆ ಸಂಬಂಧಿಸಿದಂತೆ 09 ಪಲಾನುಭವಿಗಳಿಗೆ ಗ್ರಾಮ ಪಂಚಾಯ್ತಿಯಲ್ಲಿ ಖಾತಾ ದಾಖಲಾಗಿರುತ್ತದೆ. ಪ್ರಸ್ತುತ ನೂತನವಾಗಿ ರಚನೆಯಾಗಿರುವ ಹಾರೋಹಳ್ಳಿ ಪಟ್ಟಣ ಪಂಚಾಯ್ತಿಗೆ ಖಾತಾಗಳನ್ನು ವರ್ಗಾಯಿಸಿಲಾಗಿರುತ್ತದೆ. ಈ ಬಗ್ಗೆ ಪರಿಶೀಲಿಸಿ ನಿಯಾಮಾನುಸಾರ ಕ್ರಮ ಕೈಗೊಳ್ಳಲಾಗುವುದು. |
| ಈ) | ನಕಲಿ ಹಕ್ಕುಪತ್ರಗಳನ್ನು ಬಳಸಿ ಮಾಡಲಾದ ಖಾತೆಗಳ ಸಂಖ್ಯೆ ಎಷ್ಟು; ಅವುಗಳನ್ನು ರದ್ದುಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು? | |

ಸಂಖ್ಯೆ: ಆರ್‌ಡಿ 266 ಎಲ್‌ಜಿಕ್ಯೂ 2022

(ಆರ್.ಅಶೋಕ)
ಕಂದಾಯ ಸಚಿವರು